ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: COVID-19 ವೈರಾಣುದಿಂದ ದೇಶಾದ್ಯಂತ ಘೋಷಿಸಿದ ಸಂಪೂರ್ಣ ಲಾಕ್‌ಡೌನ್‌ನಿನ ಹಿನ್ನೆಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 (ತಿದ್ದುಪಡಿ) ಅಧಿನಿಯಮ 2013 ರ ಕಲಂ 33 ರಲ್ಲಿ ಇರುವ ವಿವಿಧ ಉಪಕಲಂನ ಅವಧಿಯನ್ನು ವಿಸ್ತರಿಸುವ ಕುರಿತು.

ಓದಲಾಗಿದೆ: ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಪತ್ರ ಸಂಖ್ಯೆ: ಲೆಪಶಾ/ಇತರೆ/ಸಸಂಲೆಪನೆಅವಿ/02/2020-21, ದಿನಾಂಕ:08.04.2020.

****

**ಪ್ರಸ್ತಾವನೆ:**

ಮೇಲೆ ಓದಲಾದ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಪತ್ರದಲ್ಲಿ COVID 19 ವಿಷಾಣುದಿಂದ ಸಂಕಷ್ಟ ಉದ್ಭವಿಸಿದ್ದು, ಇದು ಒಂದು ಆಕಸ್ಮಿಕ ಆಪತ್ತುಎಂದು ಪರಿಗಣಿಸಿ ಸದರಿ ವಿಷಾಣುವಿನ ನಿರ್ಮೂಲನೆಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ದೇಶಾದ್ಯಂತ ಸಂಪೂರ್ಣ ಲಾಕ್‌ಡೌನ್ ಘೋಷಿಸಲಾಗಿದೆ. ಇದಕ್ಕೆ ಅನುಗುಣವಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 (ತಿದ್ದುಪಡಿ) ಅಧಿನಿಯಮ 2013 ರ ಕಲಂ 33ರಲ್ಲಿ ಇರುವ ವಿವಿಧ ಉಪ ಕಲಂನಲ್ಲಿ ನಿಗದಿಪಡಿಸಿದ ಅವಧಿಯನ್ನು ವಿಸ್ತರಿಸುವುದು ಸೂಕ್ತ ಎಂದು ತಿಳಿಸಿ, ಈ ಕೆಳಕಂಡಂತೆ ಅವಧಿ ವಿಸ್ತರಣೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

1) ಕರ್ನಾಟಕ ಸೌಹಾರ್ದ ಸಹಕಾರಿತಿದ್ದುಪಡಿಕಾಯ್ದೆ 2013 ರ ಕಲಂ 33(7) ರನ್ವಯಆರ್ಥಿಕ ವರ್ಷ ಮುಗಿದ 30 ದಿನಗಳ ಒಳಗಾಗಿ ಆ ಆರ್ಥಿಕ ವರ್ಷದಆರ್ಥಿಕ ತ:ಖ್ತೆಗಳನ್ನು ಸಿದ್ಧಪಡಿಸಿ ಲೆಕ್ಕ ಪರಿಶೋಧನೆಗೆ ಹಾಜರಪಡಿಸುವುದುಕಡ್ಡಾಯವಾಗಿದ್ದು, ಸದರಿ 30 ದಿನಗಳ ಅವಧಿಯನ್ನು ಪ್ರಸಕ್ತ ಸಾಲಿಗೆ ಜೂನ್ 30 ರ ಒಳಗಾಗಿ ಸಲ್ಲಿಸಲು ಸಂಘಸಂಸ್ಥೆಗಳಿಗೆ ಅವಕಾಶ ನೀಡುವ ಬಗ್ಗೆ.

2) ಕರ್ನಾಟಕ ಸೌಹಾರ್ದ ಸಹಕಾರಿತಿದ್ದುಪಡಿಕಾಯ್ದೆ 2013 ರ ಕಲಂ 33(1) ರನ್ವಯ ಪ್ರತಿಯೊಂದು ಸಹಕಾರ ಸಂಘವು ತನ್ನ ಲೆಕ್ಕ ಪುಸ್ತಕಗಳ ಲೆಕ್ಕಪರಿಶೋಧನೆಯನ್ನು ಪ್ರತಿ ವರ್ಷ 1 ನೇ ಸೆಪ್ಟೆಂಬರ್‌ಒಳಗಾಗಿ ಕಡ್ಡಾಯವಾಗಿ ಮಾಡಿಸಕೊಳ್ಳಬೇಕಾಗಿದ್ದು, ಆದರೇ ಈ ಮೇಲಿನಂತೆ ಅವಧಿಯನ್ನು ಜೂನ್ 30 ರವರೆಗೆ ವಿಸ್ತರಿಸಬಹುದಾಗಿದ್ದರಿಂದ ಲೆಕ್ಕಪರಿಶೋಧನೆ ಮಾಡಿಸಿಕೊಳ್ಳುವ ಅವಧಿಯು ಸಹ ಸೆಪ್ಟೆಂಬರ್1 ರಿಂದ ನವೆಂಬರ್ 1 ರವರೆಗೆ ವಿಸ್ತರಿಸುವ ಬಗ್ಗೆ.

3) ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಕಾಯ್ದೆ 2013 ರ ಕಲಂ 33(8) ರನ್ವಯ ಲೆಕ್ಕ ಪರಿಶೋಧಕರು ಸಂಘಕ್ಕೆ, ಸಹಕಾರ ಸಂಘಗಳ ನಿಬಂಧಕರಿಗೆ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಹಾಗೂ ಆರ್ಥಿಕ ಸಹಾಯ ಒಗಗಿಸುವ ಸಂಸ್ಥೆಗಳಿಗೆ ಲೆಕ್ಕ ಪರಿಶೋಧನಾ ವರದಿಯನ್ನು 1ನೇ ಸೆಪ್ಟೆಂಬರ್ ಒಳಗಾಗಿ ಸಲ್ಲಿಸಬೇಕಾಗಿದ್ದು, ಸದರಿ ಅವಧಿಯು ಸಹ 1 ನೇ ನವೆಂಬರ್ ವರೆಗೆ ವಿಸ್ತರಿಸುವ ಬಗ್ಗೆ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮದ ಕಲಂ 70ರಂತೆ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉಂಟಾದರೆ ಸರ್ಕಾರವು ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸಲು ಅಗತ್ಯವೆಂದು ಅಥವಾ ಯುಕ್ತವೆಂದು ಕಂಡುಬರುವ ಉಪಬಂಧಗಳನ್ನು ಮಾಡಬಹುದು. ತೊಂದರೆಗಳನ್ನು ನಿವಾರಿಸುವ ಅಧಿಕಾರವು ರಾಜ್ಯ ಸರ್ಕಾರಕ್ಕೆ ಇರುವುದರಿಂದ ಮೇಲೆ ವಿವರಿಸಿರುವ ಕಾರಣಗಳಿಂದಾಗಿ ಪ್ರಸಕ್ತ ವರ್ಷದಲ್ಲಿ ಆರ್ಥಿಕ ತ:ಖ್ತೆಗಳನ್ನು ಸಿದ್ಧಪಡಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವ ಅವಧಿ, ಲೆಕ್ಕಪರಿಶೋಧನೆಯನ್ನು ಮಾಡಿಸಿಕೊಳ್ಳಬೇಕಾದ ಅವಧಿ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸುವ ದಿನಾಂಕಗಳನ್ನು ವಿಸ್ತರಿಸುವ ಕುರಿತು ಹಾಗೂ ಅದಕ್ಕನುಗುಣವಾಗಿ ವಾರ್ಷಿಕ ಮಹಾಸಭೆ ಜರುಗಿಸುವ ದಿನಾಂಕಗಳನ್ನು ವಿಸ್ತರಿಸಲು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಕೋರಿರುತ್ತಾರೆ.



Scanned with CamScanner

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 34 ಸಿಎಲ್‌ಎಂ 2020, ಬೆಂಗಳೂರು, ದಿನಾಂಕ: 17.04.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 (ತಿದ್ದುಪಡಿ) ಅಧಿನಿಯಮ 2013 ರ ಕಲಂ 33ರಲ್ಲಿ ಇರುವ ವಿವಿಧ ಉಪ ಕಲಂನಲ್ಲಿ ನಿಗದಿಪಡಿಸಿದ ಅವಧಿಯನ್ನು ವಿಸ್ತರಿಸುವುದು ಸೂಕ್ತ ಎಂದು ತಿಳಿಸಿ, ಈ ಕೆಳಕಂಡಂತೆ ವಿಸ್ತರಿಸಿ ಆದೇಶಿಸಿದೆ.

1) ಕರ್ನಾಟಕ ಸೌಹಾರ್ದ ಸಹಕಾರಿತಿದ್ದುಪಡಿಕಾಯ್ದೆ 2013 ರ ಕಲಂ 33(7) ರನ್ವಯಆರ್ಥಿಕ ವರ್ಷ ಮುಗಿದ 30 ದಿನಗಳ ಒಳಗಾಗಿ ಆ ಆರ್ಥಿಕ ವರ್ಷದ ಆರ್ಥಿಕ ತ:ಖ್ತೆಗಳನ್ನು ಸಿದ್ಧಪಡಿಸಿ ಲೆಕ್ಕ ಪರಿಶೋಧನೆಗೆ ಹಾಜರಪಡಿಸುವುದು ಕಡ್ಡಾಯವಾಗಿದ್ದು, ಸದರಿ 30 ದಿನಗಳ ಅವಧಿಯನ್ನು ಪ್ರಸಕ್ತ ಸಾಲಿಗೆ ಜೂನ್ 30 ರ ಒಳಗಾಗಿ ಸಲ್ಲಿಸಲು ಸಂಘ ಸಂಸ್ಥೆಗಳಿಗೆ ಅವಕಾಶ ನೀಡಲಾಗಿದೆ.

2) ಕರ್ನಾಟಕ ಸೌಹಾರ್ದ ಸಹಕಾರಿತಿದ್ದುಪಡಿಕಾಯ್ದೆ 2013 ರ ಕಲಂ 33(1) ರನ್ವಯ ಪ್ರತಿಯೊಂದು ಸಹಕಾರ ಸಂಘವು ತನ್ನ ಲೆಕ್ಕ ಪುಸ್ತಕಗಳ ಲೆಕ್ಕಪರಿಶೋಧನೆಯನ್ನು ಪ್ರತಿ ವರ್ಷ 1 ನೇ ಸೆಪ್ಟೆಂಬರ್‌ಒಳಗಾಗಿ ಕಡ್ಡಾಯವಾಗಿ ಮಾಡಿಸಕೊಳ್ಳಬೇಕಾಗಿದ್ದು, ಆದರೇ ಈ ಮೇಲಿನಂತೆ ಅವಧಿಯನ್ನು ಜೂನ್ 30 ರವರೆಗೆ ವಿಸ್ತರಿಸಬಹುದಾಗಿದ್ದರಿಂದ ಲೆಕ್ಕಪರಿಶೋಧನೆ ಮಾಡಿಸಿಕೊಳ್ಳುವ ಅವಧಿಯು ಸಹ ಸೆಪ್ಟೆಂಬರ್1 ರಿಂದ ನವೆಂಬರ್ 1 ರವರೆಗೆ ವಿಸ್ತರಿಸಲಾಗಿದೆ.

3) ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಕಾಯ್ದೆ 2013 ರ ಕಲಂ 33(8) ರನ್ವಯ ಲೆಕ್ಕ ಪರಿಶೋಧಕರು ಸಂಘಕ್ಕೆ, ಸಹಕಾರ ಸಂಘಗಳ ನಿಬಂಧಕರಿಗೆ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಹಾಗೂ ಆರ್ಥಿಕ ಸಹಾಯ ಒದಗಿಸುವ ಸಂಸ್ಥೆಗಳಿಗೆ ಲೆಕ್ಕ ಪರಿಶೋಧನಾ ವರದಿಯನ್ನು 1ನೇ ಸೆಪ್ಟೆಂಬರ್ ಒಳಗಾಗಿ ಸಲ್ಲಿಸಬೇಕಾಗಿದ್ದು, ಸದರಿ ಅವಧಿಯು ಸಹ 1 ನೇ ನವೆಂಬರ್ ವರೆಗೆ ವಿಸ್ತರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ.ಎಂ. ಆಶಾ)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಇವರಿಗೆ :**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 25 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು :**

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-560 052.
3. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಬಸವನಗುಡಿ, ಬೆಂಗಳೂರು.
4. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

Scanned with CamScanner